EXTENSION OF VILLAGE AMBEVADI IN BELGAUM TALUK

743. SRI P. B. NANDIHALI (Uchagaon) : –

Will the Minister for Revenue be pleased to state :—

(*a*) whether it is a fact that the villagers of Ambewadi taluk, Belgaum have deposited the amount for the site for village extension, if so, when and how much:

(*b*) whether this issue was raised on the floor of the House many times and the Hon'ble Minister for Revenue has promised to reconsider this case.

(*c*) the opinion of the concerned Grampanchayat?

SRI H. V. KOUJALGI [Minister for Revenue] :—

(*a*) The Village Panchayat Committee has credited a portion of amount towards the cost of Acquisition charges as follows :—

Date	*Amount credited*
	Rs. P.
12-11-1956	9,500-00
26-11-1956	2,500-00
29-11-1956	471-62
Total ...	12,471-62

(*b*) Yes . the acquisition proceedings has to be dropped as the Deputy Commissioner after inspection of the proposed sites found them low lying and unsuitable for village extension.

(*c*) The Panchayat is insisting on the acquisition of land in Survey Numbers 1, 2, 3, etc., of Aambevadi village which are in a low lying area not suitable for village extension.

Notice of adjournment motion regarding the damage done to the Houses in Mahalaxmi lay out due to heavy gale?

†ಶ್ರೀ ಎಂ. ನಾಗಪ್ಪ : - (ರಾಯಚೂರು) : ಸ್ವಾಮಿ, ನಿನ್ನೆ ರಾತ್ರಿ ಬಿರುಗಾಳಿಯಿಂದ ರಾಜಾಜಿ ನಗರದ ಮಹಾಲಕ್ಷ್ಮಿಪುರ ಲೇಔಟ್‌ನಲ್ಲಿ ಹೌಸಿಂಗ್ ಬೋರ್ಡಿನವರು ಕಟ್ಟಿಸಿದ್ದ ಸಾಧಾರಣವಾಗಿ ೨೪ ಮನೆಗಳಲ್ಲಿ ಆ ಮನೆಗೆ ಮೇಲ್ಛಾವಣಿಗೆ ಹಾಕಿದ್ದ ಅಸೆಬೆಸಾಸ್ಟ್ ಷೀಟ್ಸ್, ಹಾರಿ ಎಲೆಕ್ಟ್ರಿಕ್ ಪೋಲ್‌ಗಳ ಮೇಲೆ ಬಿದ್ದು ಆ ಪೋಲೆಗಳು ಸಹಿತ ಬೆಂಡಾಗಿವೆ. ಆ ಮನೆಗಳಲ್ಲಿ ವಾಸ ಮಾಡುತ್ತಿದ್ದ ಅನೇಕ ಜನಗಳಿಗೆ ಗಾಯಗಳಾಗಿವೆ. ಅದರಲ್ಲಿ ಮೂರು ಜನಗಳಿಗೆ ಸೀರಿಯಸ್ ಆಗಿ ಗಾಯಗಳಾಗಿವೆ. ಇದರ ಬಗ್ಗೆ ತಾವು ಹೇಳಬಹುದು, ಇದು ಗಾಳಿಗೆ ಆದದ್ದು, ಇದಕ್ಕೆ ಸರ್ಕಾರ ಏನು ಮಾಡುವುದಕ್ಕೆ ಸಾಧ್ಯವಿದೆ. ಆದರೆ ಈ ಮನೆಗಳು ಏನಿವೆ ಇವು ಹೌಸಿಂಗ್ ಬೋರ್ಡಿನವರು ಕಟ್ಟಿಸಿದಂತಹ ಮನೆಗಳು. ಹೌಸಿಂಗ್ ಬೋರ್ಡಿನವರು

(ಶ್ರೀ ಎಂ. ನಾಗಪ್ಪ)

ಈ ಲೇಔಟ್‌ನಲ್ಲಿ ೧೭೪ ಮನೆಗಳನ್ನು ಕಟ್ಟಿಸಿದ್ದಾರೆ, ಆ ಮನೆಗಳ ಫೈನಲ್ ಬಿಲ್ ಸಹಿತ ಆಗಿಲ್ಲ. ಒಂದೊಂದ ಮನೆಗೆ ೬ ಸಾವಿರ ರೂಪಾಯಿಗಳಾಗುತ್ತದೆ. ಆ ಮನೆಗಳಿಗೆ ಒಂದು ಮನೆಗೆ ಒಂದು ತಿಂಗಳಿಗೆ ೩೪ ರೂಪಾಯಿ ಬಾಡಿಗೆಯನ್ನು ಕಲೆಕ್ಟ್ ಮಾಡುತ್ತಿದ್ದಾರೆ. ಆದರೆ ಈ ಮನೆಗಳ ಮೇಂಟಿನನ್ಸ್ ಅನ್ನು ಹೌಸಿಂಗ್ ಬೋರ್ಡಿನ ಅಧ್ಯಕ್ಷರಾಗಲೀ, ಸಂಬಂಧಪಟ್ಟ ಮಂತ್ರಿಗಳಾಗಲೀ ಸರಿಯಾಗಿ ನೋಡಿಕೊಳ್ಳುತ್ತಿಲ್ಲ. ಶ್ರೀಮಾನ್ ಅಬ್ದುಲ್‌ಖಿದ್ವಾಯ್ ಅವರು, ಶ್ರೀಮಾನ್ ಜಾಲಿಸತಿಗಿಯವರು, ಶ್ರೀಮಾನ್ ಶಿವಾನಂದ ಸ್ವಾಮಿಯವರು ಮತ್ತು ನಾನು ಈ ದಿವಸ ಬೆಳಿಗ್ಗೆ ಬಿರುಗಾಳಿಯ ಹೊಡೆತಕ್ಕೆ ಸಿಕ್ಕಿ ಅನಾಹುತವಾಗಿರತಕ್ಕ ಹೌಸಿಂಗ್ ಬೋರ್ಡಿನ ಮನೆಗಳ ಹತ್ತಿರ ಹೋಗಿದ್ದೆವು. ಅಲ್ಲಿ ನಡೆದಂತಹ ಪರಿಸ್ಥಿತಿಯನ್ನು ನೋಡಿದಾಗ ಆ ಜಕಂ ಆಗಿರತಕ್ಕ ಹೌಸಿಂಗ್‌ಬೋರ್ಡ ಮನೆಗಳ ಪಕ್ಕದಲ್ಲಿರತಕ್ಕ ಗುಡಿಸಲುಗಳ ಒಂದು ಎಲೆಕೂಡ ಆ ಬಿರು ಗಾಳಿಗೆ ಹಾರಿ ಹೋಗಿಲ್ಲ. ಆದರೆ ೫-೬ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಿಸಿರತಕ್ಕ ಹೌಸಿಂಗ್‌ಬೋರ್ಡ ಮನೆಗಳ ಫ್ರಂಟ್ ಪೋಷನ್ನಿನ ಸಿಮೆಂಟ್ ರೂಫಿಂಗ್ ಕ್ರಾಕ್ ಆಗಿದೆ. ಮೇಲ್ಛಾವಣಿಯ ಅಸೆಬೆಸಾಸ್ಟ್‌ಪೀಟ್ಸ್ ಎಲ್ಲಾ ಹಾರಿ ಹೋಗಿವೆ. ಗೋಡೆಗಳು ಕ್ರಾಕ್ ಆಗಿವೆ. ರೂಫ್ ಬೀಳುವ ಪರಿಸ್ಥಿತಿಯಲ್ಲಿದೆ ಮನೆಯಲ್ಲಿ ಜನಗಳು ಶಾಂತಿಯುತವಾಗಿರುವುದಕ್ಕೆ ಸಾಧ್ಯವಿಲ್ಲ. ಮನೆಯು ಅಪಾಯಕಾರಿಯಾದ ಸ್ಥಿತಿಯಲ್ಲಿದೆ. ಅದಕ್ಕಾಗಿ ನಾನು ರಾಜ್ಯ ಸರ್ಕಾರದ ಈ ಖಾತೆಗೆ ಸಂಬಂಧಪಟ್ಟ ಮಂತ್ರಿಗಳನ್ನು ಕೇಳುತ್ತೇನೆ. ಈ ಹೌಸಿಂಗ್ ಬೋರ್ಡ ಮನೆಗಳ ಫೈನಲ್ ಬಿಲ್ ಕೂಡ ಇನ್ನೂ ಆಗಿಲ್ಲ. ಹೀಗಿರುವಾಗ ಬರೀಗಾಳಿಯ ಹೊಡೆತಕ್ಕೆ ಆಸೆಬೆಸ್ಟ್‌ಷೀಟ್‌ಗಳೆಲ್ಲಾ ಹಾರಿ ಹೋಗಿ, ಗೋಡೆಗಳೆಲ್ಲಾ ಕ್ರಾಕ್ ಬಂದಿದೆ, ರೂಫಿಂಗ್ ಕೂಡ ಬಗ್ಗಿದೆ. ಆಸ್‌ಬೆಸ್ಟೋಷೀಟ್‌ಗಳು ಹಾರಿ ಬಂದು ರಸ್ತೆಗಳಲ್ಲಿ ಬಿದ್ದಿವೆ. ಬ್ಲಾಕ್ ಆಗಿದೆ. ಇದು ರಸ್ತೆ ಬಹಳ ಗಂಭೀರವಾದ ಪ್ರಶ್ನೆ. ದಯವಿಟ್ಟು ಮಾನ್ಯ ಮಂತ್ರಿಗಳು ಈ ಕಡೆ ಲಕ್ಷ್ಯ ಇಟ್ಟು ಇದರ ಬಗ್ಗೆ ಇನ್‌ವೆಸ್ಟಿಗೇಷನ್ ಮಾಡಿಸಬೇಕು. ಮತ್ತು ಈ ವಿಷಯವನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಮಾನ್ಯ ಅಧ್ಯಕ್ಷರು ಅವಕಾಶವನ್ನು ಮಾಡಿಕೊಡಬೇಕೆಂದು ನಾನು ವಿನಂತಿ ಮಾಡಿ-ಕೊಳ್ಳುತ್ತೇನೆ.

†ಶ್ರೀ ವಿ.ಎಲ್. ಶಿವಪ್ಪ :—ಮಾನ್ಯ ನಾಗಪ್ಪನವರು ಎತ್ತಿರತಕ್ಕ ವಿಚಾರದಲ್ಲಿ ಎರಡು ಮಾತು ಗಳನ್ನು ಹೇಳುತ್ತೇನೆ. ಇದು ನಡೆದ ಸ್ಥಳ ಬೆಂಗಳೂರಿನಿಂದ ನಾಲ್ಕು ಮೈಲು ದೂರದಲ್ಲಿದೆ. ಸರ್ಕಾರದವರು ಈ ಮನೆಗಳಿಗೆ ಯಾವ ರೀತಿ ಖರ್ಚು ಮಾಡಿದ್ದಾರೆ ಮತ್ತು ಇದರಿಂದ ಜನರು ಯಾವ ರೀತಿ ಕಷ್ಟ ಪಡುವ ಹಾಗೆ ಆಗಿದೆಯೆಂಬುದನ್ನು ನೋಡಬೇಕಾಗಿದೆ ಈ ಮನೆಗಳನ್ನು ಕಟ್ಟುವಾಗ ಸರ್ಕಾರದವರು ಯಾವ ರೀತಿ ಸಿಮೆಂಟ್ ಪ್ರೊಪೋರ್ಶರನ್ಸ್, ಹಾಕಿದ್ದಾರೆ, ಎಂಬುದನ್ನು ನೋಡುವುದಕ್ಕೆ ಈಗ ಸೊಗಸಾದ ಸ್ಥಳ ಆದು. ಆಲ್ಲಿರತಕ್ಕ ಜನರು ಊಟ ಮಾಡತಕ್ಕ ಸನ್ನಿವೇಶದಲ್ಲಿ. ಗೋಡೆಗಳು ಕಳಚಿ ಬಿದ್ದಿವೆ ಮತ್ತು ಇದರಿಂದ ಅನೇಕ ಜನರಿಗೆ ಗಾಯಗಳಾಗಿವೆ, ಆದರಲ್ಲಿ ಮೂರು ಜನರಿಗೆ ತೀವ್ರವಾದ ಜಕಂ ಆಗಿದೆ. ಅಲ್ಲಿ ಈ ರೀತಿ ಆದ-ಗಾಯಗಳಿಂದ ಪ್ರತಿಯೊಂದು ಕಡೆಯೂ ರಕ್ತದ ಕಲೆ ಇವೆ. ಇಂಥ ಮನೆಗಳನ್ನು ಸರ್ಕಾರದವರು ಕಟ್ಟಿಸಿ ಅವರಿಂದ ತಿಂಗಳಿಗೆ ೩೪ ರೂಪಾಯಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಅಲ್ಲಿ ಬಾತ್ ರೂಮಿಗೆ ಬಾಗಿಲು ಇಲ್ಲ. ಅಡಿಗೆ ಮನೆಗೆ ಬಾಗಿಲು ಇಲ್ಲ. ಇಂಥ ಮನೆಗಳನ್ನು ಸರ್ಕಾರದವರು ಕಟ್ಟಿದ್ದಾರೆ. ಆ ಮನೆ ಯಾವಾಗ ಬೀಳುತ್ತದೆಂದು ಗೊತ್ತಾಗುವುದಿಲ್ಲ. ಇದಲ್ಲದೆ, ಅಲ್ಲಿಯ ಜನರಿಗೆ ''ನೀವೇ ಆದನು ಬೀಳಿಸಿದ್ದು, ನಿಮ್ಮ ಮೇಲೆ ಏಕೆ ಕ್ರಮ ತೆಗೆದುಕೊಳ್ಳಬಾರದು. ಪೋಲೀಸ್‌ಗೆ ದೂರು ಕೊಡುತ್ತೇವೆ'' ಎಂದು ಅಧಿಕಾರಿಗಳು ಗದರಿಸುತ್ತಿದ್ದಾರಂತೆ. ಇದನ್ನು ಬೇಕಾದರೆ ನೀವು ಹೋಗಿ ನೋಡಿಕೊಂಡು ಬನ್ನಿ. ಆದರಿಂದ ಆ ಮನೆಗಳಲ್ಲಿರುವ ಜನರಿಗೆ ಇರುವುದಕ್ಕೆ ತಕ್ಕ ಬೇರೆ ವ್ಯವಸ್ಥೆಗಳನ್ನು ಮಾಡಿ ಇದರ ವಿಚಾರಣೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಬಿ. ಭಾಸ್ಕರ ಶೆಟ್ಟಿ (ಕಾಪು) :—ಸ್ವಾಮಿ, ನಾನೂ ಈ ವಿಚಾರದಲ್ಲಿ ಒಂದು ಅಡ ರ್ನ್‌ಮೆಂಟ್ ಮೋಷನ್ ಕಳಿಸಿಕೊಟ್ಟಿದ್ದೇನೆ. ಈಗ ಮಾನ್ಯ ಸದಸ್ಯರು ಹೇಳಿದ ವಿಚಾರವನ್ನು ನಾನು ಪುನರಪಿ ಹೇಳುವುದಿಲ್ಲ. ಆದರೆ ಅಲ್ಲಿಯ ಕಾರ್ಮಿಕರು, ನಿನ್ನೆಯ ದಿವಸ ಮಳೆ ಬಿದ್ದಾಗ, ಗಾಯವಾದ ಜನರನ್ನು ತೆಗೆದುಕೊಂಡು ಇ.ಎಸ್.ಐ ಆಸ್ಪತ್ರೆಗೆ ಹೋದರಂತೆ. ಆದರೆ ಅಲ್ಲಿ ಅದಕ್ಕೆ ಬೇಕಾದ ಮದ್ದು ಇಲ್ಲ, ವಿಕ್ಟೋರಿಯಾ ಆಸ್ಪತ್ರೆಗೆ ಹೋಗಿ ಎಂದು ಅವರಿಗೆ ಅಲ್ಲಿ ಹೇಳಿದ್ದಾರಂತೆ. ಆದರಲ್ಲಿ ಒಂದು ಮಗುವಿಗೆ ತೀವ್ರ ಗಾಯವಾಗಿ ತಲೆ ಒಡೆದು ಹೋಗಿದೆ. ಆದರೂ, ಅವರು ''ನೀವು ಯಾರ್ರಿ ಇಲ್ಲಿ ಬರುವುದಕ್ಕೆ, ನೀವು ಮೈದಾನದಲ್ಲಿ ಬಿದು ಹೋಗಿರಿ,'' ಎಂದೆಲ್ಲಾ ಸಿಕ್ಕಾಪಟ್ಟೆ ಅಂದಿದ್ದಾರಂತೆ. ಹೀಗಿರುವುದರಿಂದ ಇದು ಏನು ಆಸ್ಪತ್ರೆ ಎಂಬುದನ್ನು

ಯೋಚನೆ ಮಾಡಬೇಕು. ಈಗ ಅವರಿಗೆ ಮೈದಾನವೇ ಗತಿಯಾಗಿದೆ, ಆದ್ದರಿಂದ ಅವರಿಗೆ ಯಾರ್ಯಾರಿಗೆ ಗಾಯಗಳಾಗಿವೆ, ಅಂಥವರನ್ನು ಆಸ್ಪತ್ರೆಯಲ್ಲಿ ಸೇರಿಸಿ, ಅವರಿಗೆ ಬೇಕಾದ ಶುಶ್ರೂಷೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

SRI AZEEZ SAIT (Narasimha rajapur) :—Sir, no issue which has been brought to the notice of the Government in this House through you, Sir, was taken seriously until some force was brought in. This is a Government which will listen only to agitation, strike, hartal and the like. Out of the 174 houses which were constructed, 75 have collapsed. Even the final bill has not been sanctioned. Under such circumstances if the workers go and stay in such houses and if they collapse they will lose their lives. Who is going to be responsible if it happens? Has the Government got any engineering cell or honest officials to look in to these matters? This Government is only hankering after power; they are not bothered as to what is happening in the State. They have not got the welfare of the people at heart. They somehow went to continue in their saddle. Therefore, I urge that this adjournment motion must be allowed.

(MR. SPEAKER *in the Chair*.)

†ಶ್ರೀ ಎಂ. ಎಂ. ಜಾಲಿಸಟ್ಟಿ (ಭಟ್ಕಳ):—ಸ್ವಾಮಿ, ಕಳೆದ ವರ್ಷ ನವಂಬರ್ ತಿಂಗಳಲ್ಲಿ ಇದೇ ನಿವೇಶನಕ್ಕೆ ನಾನು ಹೋಗಿ, ಅಲ್ಲಿ ಅನಾಹುತವಾಗುತ್ತದೆಂದು ಮುಖ್ಯಮಂತ್ರಿಯವರಿಗೆ ಹೇಳಿದ್ದೇನೆ. ಆದರೆ ಕೆಲವನ್ನು ರಿಪೇರಿ ಮಾಡಿದ್ದಾರೆ. ಮತ್ತೊಂದು ಮಳೆ ಬಿದ್ದರೆ ಅಲ್ಲಿ ಜನರು ಇರುವುದಕ್ಕೆ ಸಾಧ್ಯವಿಲ್ಲ. ನಾವೇನೋ ಹೌಸಿಂಗ್ ಬೋರ್ಡಿನವರಿಗೆ ಮನೆಕಟ್ಟುವುದಕ್ಕೆ ಕೊಡುತ್ತೇವೆ. ಅವರು ಯಾವ ರೀತಿ ಕಟ್ಟುತ್ತಾರೆಂದು ನಾವು ಸ್ವತಃ ಈಗ ಹೋಗಿ ನೋಡಿದರೆ ಗೊತ್ತಾಗುತ್ತದೆ. ಅಲ್ಲಿಗೆ ಸ್ವತಃ ಮಂತ್ರಿಯವರೇ ಹೋಗಬೇಕು. ಇವತ್ತು ಈ ರೀತಿಯ ಮನೆಗಳನ್ನು ಕಟ್ಟಿ ಬಡಜನರಿಗೆ ಕೊಟ್ಟರೆ, ಅವರು ಅಂಥ ಮನೆಗಳಲ್ಲಿ ಹೇಗೆ ವಾಸಮಾಡುವುದು? ಮಲ ಮೂತ್ರ ವೆಲ್ಲಾ ಕೆಳಗಡೆ ಇಳಿಯುವ ಹಾಗೆ ಕಟ್ಟಿದ್ದಾರೆ. ಇದನ್ನು ಕಟ್ಟುವಾಗ ಏನೋ ಇಂಜಿನಿಯರ್ಸ್‌ಗೆ ಇಷ್ಟು ಪರ್‌ಸೆಂಟೇಜ್ ಎಂದು ಕೊಟ್ಟು ಕಟ್ಟಿದ್ದಾರೆಂದು ಕಾಣುತ್ತದೆ, ಮತ್ತು ಈಗ ಅಲ್ಲಿಯ ಜನರಿಗೆ ಇವರು ಹೆದರಿಸುತ್ತಿದ್ದಾರಂತೆ. ಇದೆಲ್ಲಾ ಬಿದ್ದು ಹೋಗುವುದಕ್ಕೆ ನೀವೇ ಕಾರಣ, ನಿಮ್ಮ ಮೇಲೆ ಏಕೆ ಕ್ರಮ ತೆಗೆದುಕೊಳ್ಳಬಾರದು ಎಂದು ಹೇಳುತ್ತಿದ್ದಾರಂತೆ ಈ ರೀತಿ ಆ ಇಂಡಸ್ಟ್ರಿಯಲ್ ಎಂಪ್ಲಾಯಿಸ್‌ಗೆ ಕಷ್ಟ ಕೊಟ್ಟರೆ ಹೇಗೆ? ಅವರು ಅಲ್ಲಿ ಬಾಳಿ ಬದುಕುವುದಾದರೂ ಹೇಗೆ ಎಂಬುದನ್ನು ಯೋಚನೆ ಮಾಡಬೇಕು. ಆದ್ದರಿಂದ ಆ ಮನೆಗಳನ್ನು ಕೂಡಲೇ ದುರಸ್ತಿ ಮಾಡಬೇಕು ಮತ್ತು ಅಲ್ಲಿ ನೊಂದ ಜನರಿಗೆ ಬೇರೆ ಅನುಕೂಲಗಳನ್ನು ಮಾಡಿ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

10-00 A. M.

ಶ್ರೀ ವೀರೇಂದ್ರ ಪಾಟೀಲ್(ಮುಖ್ಯಮಂತ್ರಿಗಳು).– ಅಧ್ಯಕ್ಷರೇ, ಇವತ್ತು ಬೆಳಗ್ಗೆ ನನ್ನ ಮನೆಗೆ ಅನೇಕ ಜನರು ಬಂದಿದ್ದರು. ನಿನ್ನ ರಾತ್ರಿ ವಿಪರೀತ ಗಾಳಿಯಿಂದ ಹೌಸಿಂಗ್ ಬೋರ್ಡ್‌ನವರು ಕಟ್ಟಿದಂಥ ಕೆಲವು ಮನೆಗಳಿಗೆ ಧಕ್ಕೆಯಾಗಿದ್ದೆ, ಒಹುಶಃ ಅಸ್‌ಬಸ್ಟೀಸ್ ರೂಫ್ ಇರುವಂಥ ಮನೆಗಳಲ್ಲಿ ರೂಫ್ ಕಿತ್ತುಕೊಂಡು ಹೋಗಿದೆ. ಇದರಿಂದ ಕೆಲವರಿಗೆ ಸಣ್ಣಪುಟ್ಟ ಗಾಯಗಳು ಆಗಿವೆಯೆಂದು ಹೇಳುತ್ತಾ ಬಂದರು ಆಗ ನಾನು ನಮ್ಮ ಅಧಿಕಾರಿಗಳಿಗೆ ಹೇಳಿದೆ. ಈಗಾಗಲೇ ಹೌಸಿಂಗ್ ಬೋರ್ಡ್ ಚೇರ್‌ಮನ್ ಮತ್ತು ಮಂತ್ರಿಗಳು ಅಲ್ಲಿಗೆ ಹೋಗಿದ್ದಾರೆ. ಅವರು ಪ್ರತ್ಯಕ್ಷವಾಗಿ ನೋಡಿಕೊಂಡು ಬರುತ್ತಾರೆ. ಅಲ್ಲಿ ಏನು ಪರಿಸ್ಥಿತಿಯಾಗಿದೆ, ಏಕೆ ಆಗಿದೆ ಎನ್ನುವುದನ್ನು ಪೂರ್ತಿಯಾಗಿ ವಿಚಾರಮಾಡಬೇಕೆಂದು ಅವರಿಗೆ ಹೇಳಿದ್ದೇನೆ. ಆದ್ದರಿಂದ ಈಗ ಪೂರ್ತಿಯಾಗಿ ಸವಿಸ್ತಾರವಾಗಿ ಮಾಹಿತಿ ನಮ್ಮ ಮುಂದೆ ಇಲ್ಲದೇ ಇರುವುದರಿಂದ ಇದಕ್ಕೆ ಹೆಚ್ಚಿಗೆ ನಾನು ಏನೂ ಹೇಳುವುದಕ್ಕಾಗುವುದಿಲ್ಲ. ಆ ವರದಿ ಬಂದ ತಕ್ಷಣವೇ ಸಂಬಂಧಪಟ್ಟ ಮಂತ್ರಿಗಳು ಹೌಸಿಂಗ್ ಬೋರ್ಡ್ ಚೇರ್‌ಮನ್ನರಿಗೆ ಸಲಹೆ ಮಾಡಿದ್ದಾರೆ. ಈಗಾಗಲೇ ಹೋಗಿರಬಹುದು.

ಶ್ರೀ ಎಂ. ನಾಗಪ್ಪ:—ನಾನು ಅಲ್ಲಿ ೯ ಗಂಟೆಯವರೆಗೂ ಇದ್ದು ಬಂದೆ ಅಲ್ಲಿಗೆ ಯಾರೂ ಬಂದಿರಲಿಲ್ಲ. ಸಿಮೆಂಟ್ ಕಾನ್‌ಕ್ರೀಟ್ ಹಾಕಿರತಕ್ಕ ರೂಫ್ ಇವತ್ತು ಬೀಳುವ ಪರಿಸ್ಥಿತಿ ಇದೆ. ವಾಲ್ಸ್ ಬಹಳ ಕ್ರ್ಯಾಕ್ ಆಗಿದೆ. ಆದ್ದರಿಂದ ಈ ಅನಾಹುತ ಗಾಳಿಯಿಂದ ಆಗಿದೆ ಎಂಬುದಾಗಿ ಹೇಳುವುದ ಕ್ಯಾಗುವುದಿಲ್ಲ. ಮೊಟ್ಟಮೊದಲನೆಯದಾಗಿ ಅದು ಬ್ಯಾಡ್ ವರ್ಕ್‌ಮನ್‌ಷಿಪ್ ಎಂಬುದಾಗಿ ತೋರಿಸುತ್ತದೆ. ಇದರ ಬಗ್ಗೆ ತರೋ ಇನ್‌ವೆಸ್ಟಿಗೇಷನ್ ಮಾಡಬೇಕು. ಇಲ್ಲದಿದ್ದರೆ ಅಲ್ಲಿರುವ ಜನರಿಗೆ ಮುಂದೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಇದರ ಬಗ್ಗೆ ತೀವ್ರ ಕ್ರಮವನ್ನು ತೆಗೆದುಕೊಳ್ಳಬೇಕು.

ಶ್ರೀ ವೀರೇಂದ್ರಪಾಟೀಲ್:—ಈ ವಿಷಯವಾಗಿ ಹೌಸಿಂಗ್ ಬೋರ್ಡ್ ಚೇರ್‌ಮನ್ನರಿಗೆ ನಾನು ಸಲಹೆ ಮಾಡಿದ್ದೇನೆ. ನಾನು ಇಲ್ಲಿಗೆ ಬರುವುದಕ್ಕೆ ಮುಂಚೆ ಅವರು ನನ್ನಲ್ಲಿಗೆ ಬಂದಿದ್ದರು. ಆದ್ದರಿಂದ ಈ ವಿಚಾರವನ್ನು ಹೌಸಿಂಗ್ ಬೋರ್ಡ್ ಚೇರ್‌ಮನ್ನರು ಮತ್ತು ಮಂತ್ರಿಗಳು ನೋಡಿಕೊಂಡು ಬರಬೇಕೆಂದು ಹೇಳಿದ್ದೇನೆ. ಅವರು ಇನ್ನೂ ಹೋಗದೇ ಇದ್ದರೆ ಈಗಲೇ ಟೆಲಿಫೋನ್ ಮಾಡಿ ಇನ್ನೊಂದುಸಾರಿ ಹೇಳುತ್ತೇನೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಮಗ್ಗುಲಲ್ಲಿರುವ ಗುಡಿಸಲುಗಳಿಗೆ ಏನೂ ಆಗಿಲ್ಲ. ಸಿಮೆಂಟ್ ರೂಫಿಂಗ್ ಕೂಲ್ಯಾಪ್ಸ್ ಆಗುವುದಕ್ಕೆ ಅವಕಾಶ ಇಲ್ಲ. ಅಲ್ಲಿ ಏನಾದರೂ ತಪ್ಪು ಇರಬಹುದು. ಬಹುಶಃ ಚೀಫ್ ಇಂಜಿನಿಯರನ್ನೂ ಸಹ ಕಳುಹಿಸಬೇಕೆಂದು ಹೇಳಿದ್ದೇನೆ. ಅವರಿಂದ ವರದಿ ಬಂದಮೇಲೆ ಏನು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

SRI AZEER SAIT:—What is the relief to the poor industrial workers? ಬಡವರು, ಕಾರ್ಮಿಕರು ಬಹಳವಾಗಿ ತೊಂದರೆಗೆ ಈಡಾಗಿದ್ದಾರೆ. ಅಂತಹವರಿಗೆ ಏನಾದರೂ ರಿಲೀಫ್ ಕೊಡಬೇಕು. ಅದಕ್ಕಾಗಿ ಇದನ್ನು ಇನ್‌ವೆಸ್ಟಿಗೇಷನ್ ಮಾಡಬೇಕು. ಕಂಟ್ರಾಕ್ಟರ್ ಯಾರು ಇದ್ದಾರೆಯೋ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ಷಿಪ್ರ ವಿಧಿಸಿ ಮನೆಗೆ ಕಳುಹಿಸಬೇಕು. ಅಲ್ಲಿ ಯಾರ್ಯಾರಿಗೆ ನಷ್ಟವಾಗಿದೆಯೇ ಅಂತಹವರಿಗೆ ಯಾವ ರೀತಿ ಪರಿಹಾರ ಕೊಡುತ್ತೀರಿ ಎಂಬುದನ್ನು ಈ ಸಭೆಗೆ ತಿಳಿಸಬೇಕು.

ಶ್ರೀ ಬಿ. ಭಾಸ್ಕರಶೆಟ್ಟಿ:—ಅನೇಕರು ಈಗ ಮನೆ ಇಲ್ಲದೆ ನಿರ್ಗತಿಕರಾಗಿ ವಿಧಾನಸೌಧದ ಮೈದಾನದಲ್ಲಿ ಬಂದಿದ್ದಾರೆ. ಮಳೆ ಬಂದರೆ ಅವರ ಪರಿಸ್ಥಿತಿಯೇನು ? ಅವರ ಆರೋಗ್ಯ ವ್ಯವಸ್ಥೆಯನ್ನು ಸರ್ಕಾರದವರು ನೋಡಿಕೊಳ್ಳುತ್ತಾರೆಂದು ಮಾನ್ಯ ಮುಖ್ಯಮಂತ್ರಿಗಳು ಈ ಸಭೆಯಲ್ಲಿ ಹೇಳಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ;—ಈಗ ಆ ರೀತಿ ತೊಂದರೆಗೀಡಾಗಿರತಕ್ಕ ಜನರು ವಾಸ ಮಾಡುವುದಕ್ಕೆ ಸ್ಥಳವಿಲ್ಲ. ಈಗ ವಿಧಾನಸೌಧದ ಹತ್ತಿರ ಬಂದಿರುವ ಮುಕ್ಕಾಲುಭಾಗ ಜನರಿಗೆ ಬೇರೆ ಪುನರ್ವಸತಿ ಸೌಕರ್ಯವನ್ನು ಮಾಡಿಕೊಡುವುದು ಬಹಳ ಮುಖ್ಯ. ಅವರಿಗೆ ಅಡಿಗೆ ಮಾಡಿಕೊಳ್ಳುವುದಕ್ಕೆ ಸ್ಥಳವಿಲ್ಲ. ಅವರಿಗೆ ಬೇರೆ ಏರ್ಪಾಡನ್ನು ಮಾಡಬೇಕು. ಆಮೇಲೆ ಉಳಿದ ವಿಚಾರಗಳನ್ನು ಪ್ರಸ್ತಾಪ ಮಾಡಬೇಕು. ಅವರಿಗೆ ಇರತಕ್ಕ ಕಷ್ಟಗಳನ್ನು ನಿವಾರಣೆ ಮಾಡುವುದಕ್ಕೆ ಏನೇನು ಸಾಧ್ಯವೋ ಅದರ ಬಗ್ಗೆ ತಕ್ಷಣ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

Sri H. SIDDAVEERAPPA.—Sir, before the House adjourns to day I hope the Hon. Chief Minister will get the report and make a statement to the House.

SRI VEERENDRA PATIL :—I stated that the Chairman of the Housing Board and the concerned Minister have gone to the spot. Naturally they will go to meet the people and hear their grievances. When they go to the spot, they will enquire into all those details. I believe they have already gone there. However, I am trying to have the information checked up. After they come back, I will discuss with them what relief is necessary. Only after we get a report from them, we can think of relief measures.

SRI H. SIDDAVEERAPPA :—The Hon. Chief Minister did not say whether he is going to make a statement before this House to-day as to what has been done.

SRI S. SIVAPPA :—The Victims had come to the residence of the Hon. Chief Minister and met him. Apart from getting a report from the Housing Board Chairman and the Minister concerned, he can straigtway make arrangements for the feeding of the homeless sufferers. Their foodstuffs mights have been washed away. Out out of humanitarian consideration, arrangements for their food may be made. The Hon. Chief Minister may also see that some allowance for these victims is given.

SRI VEERENDRA PATIL ;—All the suggestions made by the Hon. Members will be taken into consideration.

MR. SPEAKER :—In view of the statement of the Hon. Chief Minister, I do not think it is necessary to discuss this Adjournment Motion. I, therefore, withhold consent to it.

Now Hon. Member Smt. K. S. Nagarathnamma is permitted to make her statement.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ) :—ಕಳೆದ ಮಾರ್ಚ್ ೩೧ನೇ ತಾರೀಖು ಅಪ್ರೊಪ್ರಿಯೇಷನ್ ಬಿಲ್ಲಿನ ಮೇಲೆ ಮಾತನಾಡಿದಾಗ ತಮ್ಮ ಮುಖಾಂತರ ಒಂದು ದೂರನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸಿದ್ದ. ಅದು ಫಾರೆಸ್ಟ್ ರೋಡ್ಸ್ ಬಗ್ಗೆ. ನಾನು ಆ ದಿನ ಇಲ್ಲಿ ಮಾತನಾಡಿದ್ದು ಯಾವ ಮಾಯದಲ್ಲಿ ಅಥವಾ ಯಾವ ವೈರ್‌ಲೆಸ್ ಮುಖಾಂತರ ಅಲ್ಲಿ ಗೊತ್ತಾಯಿತೊ ನನಗೆ ಗೊತ್ತಿಲ್ಲ. ನಾನು ನಿನ್ನೆ ಲಗ್ನಕ್ಕೆ ಹೋಗಿದ್ದೆ ಅವರು ರಾತ್ರೊ ರಾತ್ರಿ ರಸ್ತೆ ನಿರ್ಮಾಣ ಕೆಲಸವನ್ನು ಅಲ್ಲಿ ಮಾಡುತ್ತಿದ್ದಾರೆ. ಸಂಬಂಧಪಟ್ಟ ಕಂಟ್ರಾಕ್ಟರ್ ಎಸ್ಟಿಮೇಟ್ ತಯಾರು ಮಾಡಿಕೊಂಡು ದುಡ್ಡು ತೆಗೆದುಕೊಂಡು ಎಷ್ಟೋ ದಿವಸಗಳಾಗಿವೆ. ಫೈನಲ್ ಬಿಲ್ ಪೂಡಿ ದುಡ್ಡು ತೆಗೆದುಕೊಂಡಿದ್ದಾರೆ. ಈಗ ಹಗಲು ರಾತ್ರಿ ಒಂದೇ ಸಮನೆ ತರಾತುರಿಯಾಗಿ ಕೆಲಸಮಾಡುವುದಕ್ಕೆ ಶುರು ಮಾಡಿದ್ದಾರೆ. ನಾನು ಇಲ್ಲಿ ದೂರು ಕೊಡುವುದಕ್ಕೆ ಮುಂಚೆ ಅಲ್ಲಿ ರಸ್ತೆ ಕೆಲಸ ಕಲಪರ್ಟ ಕೆಲಸಗಳು ಏನೂ ಆಗಿಲ್ಲ. ಸರ್ಕಾರದವರು ಇದರ ಬಗ್ಗೆ ಜವಾಬ್ದಾರಿ ತೆಗೆದುಕೊಳ್ಳಬೇಕು. ನಾನು ಹೇಳುವುದು ನಿಜವೇ ಸುಳ್ಳೇ ಎಂಬುದು ತಮಗೇ ಗೊತ್ತಾಗಬೇಕು. ಇವತ್ತಿನ ದಿವಸ ಅವರಿಗೆ ಬೇಕಾದಷ್ಟು ಏಜನ್ಸಿಗಳಿವೆ, ಅವರ ಮೂಲಕ ಇದನ್ನು ಪತ್ತೆ ಮಾಡುವುದಕ್ಕೆ ಪ್ರಯತ್ನ ಮಾಡಿದರೆ, ಖಂಡಿತವಾಗಿ ನನ್ನ ಮಾತು ನಿಜವಾಗಿ ಕಾಣುತ್ತದೆ. ಯಾರ ಮುಖಾಂತರ ಸಂಬಂಧಪಟ್ಟ ಕಂಟ್ರಾಕ್ಟರ್ ಎಷ್ಟು ದುಡ್ಡು ತಿಂದಿದ್ದಾನೆ, ಯಾವ ಅಧಿಕಾರಿಗಳು ಅವನ ಪ್ರಭಾವಕ್ಕೊಳಗಾಗಿದ್ದಾರೆ ಎಂಬುದನ್ನು ಕೂಡಲೇ ಇವತ್ತಿನ ದಿವಸ ತನಿಖೆ ಮಾಡುವುದಕ್ಕೆ ಏರ್ಪಾಡು ಮಾಡಬೇಕು. ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರು ಈ ವಿಚಾರದ ಕಡೆ ಗಮನ ಕೊಡಬೇಕು. ಅಧಿಕಾರಿಗಳಿಗೆ ಕೊಡಬೇಕೆಂದು ಅವರ ಇರಾದೆ ಇದ್ದರೆ ಅದರ ಬಗ್ಗೆ ನನ್ನ ಅಬ್‌ಜಕ್ಷನ್ ಏನೂ ಇಲ್ಲ. ನಮ್ಮ ಅಬ್‌ಜಕ್ಷನ್ ಇದ್ದರೂ ನಾವು ಹೆಲ್ಪ್‌ಲೆಸ್ ಆಗಿದ್ದೇವೆಂದು ಹೇಳುವುದಕ್ಕೆ ಇಷ್ಟಪಡುತ್ತಿದ್ದೇವೆ. ಈ ವಿಚಾರದಲ್ಲಿ ಅವರು ನನಗೆ ಜವಾಬು ಹೇಳುವುದಕ್ಕೂ ಅವರಿಗೆ ಇಷ್ಟವಿಲ್ಲವೆಂದು ನನಗೆ ಕಾಣುತ್ತದೆ.

MR SPEAKER:—May I know whether Government is going to make statement with regard to the point raised by the Hon. Lady Member.

SRI H. SIDDAVEERAPPA :—The Hon. Ministers are neglecting the business of the House. They were not attentive and have not listened to the speech of Hon. Member Smt. K. S. Nagarathnamma. I do not think their conduct can be approved. The Ministers ought not to be busy with other things, they should not be busy with any thing other than what is going on in the House. They ought not to be engaged in anything except the business of the House. Otherwise the business of the House will suffer.

SRI RAMAKRISHNA HEGDE (Minister for Finance Planning and youth welfare) :—Sir, with all humility, I have to say that the Ministers are not responsible if their attension is being distracted. They are not doing anything else except listening to the debate. Some times, if Hon. Members of this House come to us here and enquire of something or want us to do something, we cannot be discourteous to them. Supposing Hon. Member Smt. K S Nagarathnamma comes when snme debate is going on, I cannot say : 'I don't want to listen to you Sometime it does happen and the Hon. Members should bear with us.

ಶ್ರೀಮತಿ ಕೆ ಎಸ್. ನಾಗರತ್ನಮ್ಮ ;— ಕಳೆದ ಮಾರ್ಚ್ ೩೧ನೇ ತಾರೀಖಿನ ದಿನ ಇಲ್ಲಿ ಅಪ್ರೊಪ್ರಿಯೇಷನ್ ಮೇಲೆ ಚರ್ಚೆ ನಡೆಯುತ್ತಿದ್ದಾಗ ನಾನು ಅರಣ್ಯ ಇಲಾಖೆಯ ವಿಚಾರದಲ್ಲಿ ಅಂದರೆ ಒಂದು ರಸ್ತೆ ನಿರ್ಮಾಣ ವಿಚಾರದಲ್ಲಿ ಎಸ್ಟಿಮೇಟನ್ನು ತಯಾರು ಮಾಡಿ ಅಲ್ಲಿ ಜಿಲ್ಲಿ ಇತ್ಯಾದಿ ಯಾವುದನ್ನೂ ಜಮಾಯಿಸದೆ ರಸ್ತೆಯನ್ನು ಮಾಡದೆ ಬಿಲ್ಲನ್ನು ಡ್ರಾ ಮಾಡಿ ದುಡ್ಡನ್ನು ತಿಂದು ಹಾಕಿದ್ದಾರೆಂದು ನಾನು ಒಂದು ಅಪಾದನೆಯನ್ನು ಈ ಸಭೆಯಲ್ಲಿ ಎತ್ತಿದ್ದೆನು. ಪುತ್ತು ಅದೇ ಸಂದರ್ಭದಲ್ಲಿ ನನಗೆ ಬಂದಿದ್ದ ಒಂದು ಪತ್ರವನ್ನು ವಿಚಾರಣೆಗಾಗಿ ಮಾನ್ಯ ಮುಖ್ಯಮಂತ್ರಿಗಳವರ ಕಡೆಗೆ ಕೊಡುವಂತೆ ಅಧ್ಯಕ್ಷರ ಮೂಲಕ ಆ ಪತ್ರವನ್ನು ಕೊಟ್ಟುಕಳುಹಿಸಿದ್ದೆ. ಅದಾದ ನಂತರ ನಾನು ಮೊನ್ನೆ ಒಂದನೇ ತಾರೀಖು ಊರಿಗೆ ಹೋಗಿದ್ದಾಗ ನಾನು ಎಲ್ಲಿ ರಸ್ತೆಯನು ಮಾಡದೆ ಹಣವನ್ನು ತಿಂದುಹಾಕಿದ್ದಾರೆಂದು ದೂರನ್ನು ಕೊಟ್ಟಿದ್ದೆನೋ ಆ ಸ್ಥಳದಲ್ಲಿ ರಾತೋರಾತ್ರಿ ಬಹಳ ತರಾತುರಿಯಿಂದ ಕೆಲಸ ಮಾಡುತ್ತಿದ್ದುದು ಕಂಡು ಬಂದಿತು. ಆದರೆ ನಾನು ಇಲ್ಲಿ ಒಂದು ಅಪಾದನೆ ಮಾಡಿದ ನಂತರ ಅಲ್ಲಿ ಈಗ ಕೆಲಸ ನಡೆಯುತ್ತಿರುವುದನ್ನು ನೋಡಿದರೆ ನಾಳೆ ನನ್ನ ದೂರಿನ ಬಗ್ಗೆ ಮುಖ್ಯ ಮಂತ್ರಿಗಳು ವಿಚಾರಣೆ ನಡೆಸಿದರೆ ಆಗ ಅವರು ಆ ಅರ್ಜಿ ಸುಳ್ಳು ಅಲ್ಲಿ ಬಂದು ತಾವು ನೋಡಿ ರಸ್ತೆ ಮಾಡಿದ್ದೇವೆಂದುಹೇಳಿದರೆ ನಾನು ಸುಳ್ಳು ಆಪಾದನೆ ಮಾಡಿದಂತಾಗುತ್ತದೆ. ಆದ್ದರಿಂದ ನಾನು ಈಗ ಹೇಳುತ್ತಿರುವುದೇನೆಂದರೆ ಈ ದಿನವೇ ಮಾನ್ಯ ಮುಖ್ಯ ಮಂತ್ರಿಗಳು ಅಲ್ಲಿಗೆ ಒಬ್ಬ ಸರಿಯಾದ ಅಧಿಕಾರಿಗಳನ್ನು ನೇಮಕ ಮಾಡಿ ಈಗಲೆ ಕಳುಹಿಸಿ ಅದನ್ನು ಪರಿಶೀಲನೆ ಮಾಡಿಸಬೇಕು. ಹಾಗೆ ಮಾಡದೆ ಇವರು ಎಂದೋ ನನ್ನ ಅರ್ಜಿಯನ್ನು ವಿಚಾರಣೆ ಮಾಡುವುದಕ್ಕೆ ಹೊರಟರೆ ಆಷ್ಟರಲ್ಲಿ ಅಲ್ಲಿ ರಸ್ತೆ ಇತ್ಯಾದಿಗಳೆಲ್ಲಾ ಆಗಿರುತ್ತದೆ. ಅದಕ್ಕೆ ಅವಕಾಶ ಕೊಟ್ಟರೆ ಯಾರು ಸತ್ಯವಂತರು ಎಂಬುದು ಗೊತ್ತಾಗುವುದಿಲ್ಲ. ಆದಕ್ಕಾಗಿ ಕೂಡಲೇ ಮುಖ್ಯಮಂತ್ರಿಗಳು ಅಲ್ಲಿಗೆ ಒಬ್ಬರನ್ನು ಕಳುಹಿಸಿ ಈದಿನವೇ ಅದನ್ನು ಪರಿಶೀಲನೆ ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ದಿವಸವೇ ಅದನ್ನು ವಿಚಾರಣೆ ಮಾಡುವುದಕ್ಕೆ ವ್ಯವಸ್ಥೆ ಮಾಡಿದರೆ ಸರ್ಕಾರಕ್ಕೆ ವ್ಯಯವಾಗಿರತಕ್ಕ ಹಣ ವಾಪಸ್ ಬರತಕ್ಕ ಸಂದರ್ಭವಿದೆ. ಇದನ್ನು ಮಾಡದೆ ಕೈಬಿಟ್ಟು ನಾಳೆ ನೀವು ಆ ತಪ್ಪಿತಸ್ಥರಾದ ಅಧಿಕಾರಿಗಳನ್ನು ಪನಿಷ್ ಮಾಡುತ್ತೇವೆಂದು ಹೇಳಿ ಅವರನ್ನು ಅಲ್ಲಿಂದ ಬೇರೆ ಕಡೆಗೆ ವರ್ಗಮಾಡುವುದಾಗಲೀ ಅಥವಾ ಅವನಿಗೆ ಒಂದು ಇನ್‌ಕ್ರಿಮೆಂಟನ್ನು ನಿಲ್ಲಿಸುವುದಾಗಲಿ ಸರಿಯಾದ ಪನಿಷ್‌ಮೆಂಟಾಗುವುದಿಲ್ಲ. ರಸ್ತೆಯನ್ನೇ ಮಾಡದೆ ಹಣವನ್ನು ಡಗ್ರಮಾಡಿ ತಿಂದು ಹಾಕುವುದಕ್ಕೆ ಈ ಸರ್ಕಾರದಲ್ಲಿ ಅವಕಾಶವಿದೆ ಎನ್ನುವುದು ತೀರಾ ನಾಚಿಕೆಗೇಡಿನ ಬದುಕು. ಇದರಿಂದ ಈ ದಿವಸ ಇಲ್ಲಿ ಸರ್ಕಾರ ಇದೆ, ಆಡಳಿತ ನಡೆಯುತ್ತಿದೆ ಎಂದು ಹೇಳಿದರೆ ನಾವು ತಲೆತಗ್ಗಿಸಬೇಕು. ಇಂಥ ನಾಚಿಕೆ ಗೇಡಿನ ಪ್ರಸಂಗ ಇದು. ಮುಖ್ಯಮಂತ್ರಿಗಳಿಗೆ ಇಷ್ಟವಿದ್ದರೆ ಈ ದಿನವೇ ಈ ಕೂಡಲೇ ಇದನ್ನು ವಿಚಾರಣೆ ಮಾಡಿಸಬೇಕು ಎಂದು ಹೇಳುತ್ತೇನೆ. ಅವರು ವಿಚಾರಣೆ ಮಾಡಿಸುವುದಿಲ್ಲವೆಂದು ಹೇಳಿದರೆ ಅದಕ್ಕೆ ನಾವು ಹೆಲ್ಪ್‌ಲೆಸ್ ಆಗಿರುವುದರಿಂದ ನಾವು ಏನು ಮಾಡುವುದಕ್ಕೂ ಆಗುವುದಿಲ್ಲ.

ಶ್ರೀ ವೀರೇಂದ್ರ ಪಾಟೀಲ್ :— ಶ್ರೀಮತಿ ನಾಗರತ್ನಮ್ಮನವರು ಸರ್ಕಾರವನ್ನು ಬೈಯ್ಯುವುದಕ್ಕೆ ಅವರಿಗೆ ಯಾವ ಅವಕಾಶ ಸಿಕ್ಕಿದರೂ ಅದನ್ನು ಬಿಡದಂತೆ ಉಪಯೋಗಿ ಮಾಡಿಕೊಳ್ಳುತ್ತಾರೆಂಬ ವಿಷಯ ನನಗೆ ಚೆನ್ನಾಗಿ ಗೊತ್ತಿದೆ. ಮೇಲಾಗಿ ಅವರಿಗೇಕೆ ಅಷ್ಟು ಸಿಟ್ಟಿದೆ ಎಂಬುದೂ ಕೂಡ ನನಗೆ ಗೊತ್ತಿದೆ. ಆದರೆ ನನಗೆ ಅಧ್ಯಕ್ಷರ ಮುಖಾಂತರ.....

ಶ್ರೀ ಎನ್. ಹುಚ್ಚಮಾಸ್ತಿಗೌಡ :— ಸ್ವಾಮಿ ನನ್ನದೊಂದು ಕ್ರಿಯಾಲೋಪ ಇದೆ ಈಗತಾನೆ ಮಾತನಾಡಿದ ಮಾನ್ಯ ಸದಸ್ಯರಾದ ಶ್ರೀಮತಿ ನಾಗರತ್ನಮ್ಮನವರು ಹೇಳಿದ್ದಾದರೂ ಏನು? ಅವರು ಕೇಳಿದ್ದು ಅವರು ಈ ಹಿಂದೆ ಏನು ಒಂದು ಆಪಾದನೆಯನ್ನು ಮಾಡಿ ಅದನ್ನು ತನಿಖೆ ಮಾಡಲು ಮುಖ್ಯ ಮಂತ್ರಿಗಳ ಕಡೆಗೆ ಒಂದು ಕಂಪ್ಲೇಂಟನ್ನು ಅಧ್ಯಕ್ಷರ ಮೂಲಕ ಕೊಟ್ಟಿದ್ದರು. ಈಗ ಆ ವಿಚಾರಣೆಯನ್ನು ಇನ್ನೂ ಪ್ರಾರಂಭಮಾಡಿಲ್ಲ. ಆದ್ದರಿಂದ ಅದನ್ನು ಆ ಆಪಾದನೆಗೆ ಒಳಗಾಗಿರತಕ್ಕ ಜನರು ಅದನ್ನು ಮುಚ್ಚಿ ಹಾಕುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂದೂ ಅದಕ್ಕಾಗಿ ಕೂಡಲೇ ಈ ದಿನವೇ ಅವನ್ನು ತನಿಖೆ ಮಾಡಿಸ ಬೇಕೆಂದು ಕೇಳುತ್ತಿದ್ದರೆ. ಇಲ್ಲದಿದ್ದರೆ ಇವರು ಕೊಟ್ಟ ಅರ್ಜಿಯನ್ನು ನೀವು ಈ ದಿವಸ ವಿಚಾರಣೆ ಮಾಡಿದಿದ್ದರೆ ನಾಳೆ ನೀವು ಶುಳ್ಳರ್ಜಿ ಎಂದು ಹೇಳಬಹುದು. ಅದಕ್ಕೆ ಅವರು ನನ್ನನ್ನು ಯಾವಾಗ ಅವಕಾಶ ಸಿಕ್ಕದರೆ ಆಗ ಬೈಯ್ಯುತ್ತಾರೆ ಎಂದರೇನು ಅರ್ಥ ? ಆದ್ದರಿಂದ ಸರ್ಕಾರದವರು ಈ ದಿವಸವೇ ಅದನ್ನು ವಿಚಾರಣೆ ಮಾಡಿಸಿ ಅದರ ಫಲಿತಾಂಶವನ್ನು ಸಭೆಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್ ;—ಅವರು ಹೇಳಿದ ವಿಚಾರ ನನಗೆ ಮನನವಾಗಿದೆ. ಅದನ್ನು ವಿಚಾರಣೆ ಮಾಡುವುದಕ್ಕೆ ತಿಳಿಸಿದ್ದೇನೆ. ಯಾವ ಒಂದು ರಸ್ತೆಯನ್ನೂ ಮಾತನೆ ಕಲ್ಪರ್ಟನ್ನೂ ಮಾಡದೆ ಹಣವನ್ನು ಡ್ರಾ ಮಾಡಿ ತಿಂದು ಹಾಕಿದ್ದಾರೆಂಬ ಒಂದು ಆಪಾದನೆಯೇನಿದೆ ಅದೇ ನಿಜವಾಗಿಯೂ ಬಹಳ ಸೀರಿಯಸ್ಸಾದ ಒಂದು ಆಫೆನ್ಸ್ ಎನ್ನುವುದರಲ್ಲಿ ಸಂದೇಹವೇ ಇಲ್ಲ. ನಾನು ಇದೇ ಸಭೆಯಲ್ಲಿ ಈ ಹಿಂದೆ ಎಷ್ಟೋಸಾರ್ತಿ ಹೇಳಿದ್ದೇನೆ-ನಮ್ಮ ಕ್ಯಾಬಿನೆಟ್ಟಿನಲ್ಲಿ ಕ್ರೀಮರ್ಸ್ ಆಗಿರತಕ್ಕ ಪ್ರಕಾರ ಇಂಥ ಕರಪ್ಷನ್ ಕೇಸುಗಳಲ್ಲಿ ಲೀಸ್ಟ್ ಪನಿಷ್‌ಮೆಂಟ್ ಎಂದರೆ ಡಿಸ್‌ಮಿಸಲ್. ಆದರೆ ಈ ದಿವಸ ಮಾನ್ಯ ಸದಸ್ಯರು ಇಲ್ಲಿ ಕಂಪ್ಲೇಂಟನ್ನು ಕೊಟ್ಟ ಮೇಲೆ ಅಲ್ಲಿ ಈಗ ಹೊಸದಾಗಿ ಕೆಲಸವನ್ನು ಪ್ರಾರಂಭಮಾಡಿದ್ದಾರೆಂದು ಹೇಳುತ್ತಿದ್ದಾರೆ. ನಾನು ಈ ಬಗ್ಗೆ ಕೂಡಲೆ ವಿಚಾರಣೆಗೆ ಏರ್ಪಾಡು ಮಾಡುತ್ತೇನೆ. ಅದರ ಫಲಿತಾಂಶವನ್ನು ಮುಂದಿನ ಅಧಿವೇಶನದಲ್ಲಿ ಸಭೆಗೆ ತಿಳಿಸುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ ;— ಮುಖ್ಯ ಮಂತ್ರಿಗಳು ಇಮ್ಮೀಡಿಯೆಟ್ಟಾಗಿ ಒಬ್ಬರನ್ನು ಕಳುಹಿಸಿ ಅಲ್ಲಿ ಕೆಲಸ ನಡೆಯುತ್ತಿದೆಯೇ ಇಲ್ಲವೇ ಎಂಬುದನ್ನು ನೋಡಲಿ.....

ಶ್ರೀ ವೀರೇಂದ್ರ ಪಾಟೀಲ್ :— ನಾನೂ ಇದೇ ವಿಚಾರವನ್ನು ಹೇಳಿದೆ. ತಕ್ಷಣ ವಿಚಾರಣೆಗೆ ನೇಮಕ ಮಾಡುತ್ತೇನೆ ಮತ್ತು ಮುಂದಿನ ಅಧಿವೇಶನದಲ್ಲಿ ಇದಕ್ಕೆ ಉತ್ತರವನ್ನು ತಿಳಿಸುತ್ತೇನೆ.

Notice of Adjournment Motion.

re :—Congress Exhibition in Bangalore in view of the Statement made by the Chief Minister.

†ಶ್ರೀ ಎಸ್. ಶಿವಪ್ಪ :—ಅಧ್ಯಕ್ಷರೇ ನಾನು ಒಂದು ಅವಸರದ ನಿರ್ಣಯವನ್ನು ಇಲ್ಲಿ ಚರ್ಚೆಮಾಡತಕ್ಕ ಉದ್ದೇಶದಿಂದ ತಪ್ಪಗೆ ಕಳುಹಿಸಿದ್ದೆ. ಅದು ಬಹಳ ಪ್ರಾಮುಖ್ಯವಾದಂಥ ಹಾಗೂ ತ್ವರಿತವಾಗಿ ಚರ್ಚೆ ಮಾಡಬೇಕಾಂಥ? ವಿಷಯ ಅದು. ಅದು ಏನು ವಿಚಾರ ಎಂದರೆ ಕಾಂಗ್ರೆಸ್ ಪಕ್ಷದವರು ಅಂದರೆ ಈ ರಾಜ್ಯದಲ್ಲಿ ಆಡಳಿತವನ್ನು ನಡೆಸುತ್ತಿರುವ ಕಾಂಗ್ರೆಸ್ ಪಕ್ಷ ಬೆಂಗಳೂರಿನಲ್ಲಿ ಒಂದು ವಸ್ತುಪ್ರದರ್ಶನವನ್ನು ನಡೆಸುವುದಕ್ಕಾಗಿ ತಮ್ಮ ಒಂದು ಪಕ್ಷದ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಿಕೊಳ್ಳುವುದಕ್ಕೂ ಮತ್ತು ತಮ್ಮ ಪಾರ್ಟಿಯನ್ನು ಬಲಗೊಳಿಸುವುದಕ್ಕೂ ನೇರವಾಗಿ ಸರ್ಕಾರದಿಂದ ಹಣವನ್ನು ಖರ್ಚುಹಾಕಿ ಜೊತೆಗೆ ಸರ್ಕಾರಿ ಶಿಬ್ಬಂದಿಯನ್ನೂ ಕೂಡ ಒಳಿಸುತ್ತಿದ್ದಾರೆ, ಆ ವಸ್ತುಪ್ರದರ್ಶನದ ಸಂಪಾದನೆಯೆಲ್ಲ ಸರ್ಕಾರಕ್ಕೆ ಸೇರುವುದಾಗಿದ್ದಿದ್ದರೆ ನಾನು ಇದರ ತಂಟೆಗೂ ಬರುತ್ತಿರಲಿಲ್ಲ. ಆದರೆ ಆ ವಸ್ತುಪ್ರದರ್ಶನದ ಸಂಪಾದನೆ ಆ ಕಾಂಗ್ರೆಸ್ ಸಂಸ್ಥೆಗೆ ಸೇರುತ್ತಿದೆ. ಈ ದಿವಸ ಕಾಂಗ್ರೆಸ್ ಧ್ವಜದಡಿಯಲ್ಲಿ ರಾಜ್ಯ ಸರ್ಕಾರದ ಅಧಿಕಾರಿ